ನಗರ ಆಶ್ರಯ ಯೋಜನೆಯಡಿ ಎಲ್ಲಾ ವರ್ಗದ ಫಲಾನುಭವಿಗಳಿಗೆ ಸಂಪೂರ್ಣ ಸಾಲವಾಗಿದ್ದು ಇದನ್ನು 180 ಕಂತುಗಳಲ್ಲಿ (15 ವರ್ಷಗಳಲ್ಲಿ) ಮರು ಪಾವತಿಸಬೇಕು

ಸಾಮಾನ್ಯ ವರ್ಗದ ಫಲಾನುಭವಿಗಳು ಸಾಲವನ್ನು ಮರುಪಾವತಿ ಮಾಡಲು ಒಪ್ಪದಿದ್ದಲ್ಲಿ ಅವರಿಗೆ ಮನೆ ನೀಡಲು ಬರುವುದಿಲ್ಲ.

ಊ) ಜೂನ್ 2003ರಲ್ಲಿ ವಸತಿ ರಹಿತರ ಸಮೀಕ್ಷೆಯನ್ನು ಮಾಡಲಾಗಿದ್ದು, ಈ ಸಮೀಕ್ಷೆಯನ್ನು ಆಧರಿಸಿ ಫಲಾನುಭವಿಗಳನ್ನು ಗ್ರಾಮ ಸಭೆಗಳಲ್ಲಿ ಆಯ್ಕೆ ಮಾಡುವ ಮೂಲಕ ಪಾರದರ್ಶಕತೆಯನ್ನು ಜಾರಿಗೊಳಿಸಲಾಗುತ್ತಿದೆ

525(942) ಶ್ರೀ ಡಿ ಆರ್ ಪಾಟೀಲ್ (ಗದಗ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) 2001–02 ಹಣಕಾಸು ವರ್ಷದಿಂದ 2006–07 ಹಣಕಾಸು ವರ್ಷಗಳಲ್ಲಿ ಕರ್ನಾಟಕ ಸರಕಾರ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಗಳೆಷ್ಟು,

ಆ) ಅದರಲ್ಲಿ ಕೇಂದ್ರ ಸರಕಾರದಿಂದ ಮಂಜೂರಾದ ಪ್ರಸ್ತಾವನೆಗಳು ಎಷ್ಟು, (ತಾಲ್ಲೂಕುವಾರು ಹಾಗೂ ಹಣಕಾಸುವಾರು ಮಾಹಿತಿ ನೀಡುವುದು)

ಇ) ಗದಗ ಜಿಲ್ಲೆಯಲ್ಲಿ ಪ್ರತಿ ತಾಲ್ಲೂಕಿನಲ್ಲಿ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯ ಅನುಷ್ಠಾನ ಯಾವ ರೀತಿ ನಡೆದಿದೆ, (ಪ್ರತಿ ಹಣಕಾಸು ವರ್ಷವಾರು ವಿವರ ನೀಡುವುದು)

ಈ) ಈ ಕೆಲಸಗಳಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಕೈಗೊಂಡಿರುವ ಕ್ರಮಗಳೇನು,

ಉ) ಕಳಪೆ ಮಟ್ಟದ ಕಾರ್ಯ ಮಾಡಿರುವ ಗುತ್ತಿಗೆದಾರರನ್ನು ಮುಂದಿನ ಯಾವುದೇ ಕೆಲಸಗಳಲ್ಲಿ ಭಾಗವಹಿಸದಂತೆ ಸರಕಾರ ಕ್ರಮ ಕೈಗೊಂಡಿದೆಯೇ, (ವಿವರ ನೀಡುವುದು)?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನೆಯಡಿಯಲ್ಲಿ 2001–02 ಹಣಕಾಸು ವರ್ಷದಿಂದ 2006–07 ಹಣಕಾಸು ವರ್ಷಗಳಲ್ಲಿ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಿದ ಪ್ರಸ್ತಾವನೆಗಳ ವಿವರಗಳು ಈ ಕೆಳಕಂಡಂತಿವೆ

ಕ್ರ. ಸಂ	ಹಣಕಾಸು ವರ್ಷ	ಯೋಜನೆಯ ಹಂತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ ಕೋಟಿಗಳಲ್ಲಿ)
1	2000–01	I	412	103 52
2	2001–02 ಮತ್ತು 2002–03	II	938	203 36
3	2003–04	III	360	118 41
4	2004–05	IV	90	101 17
5	2005–06	V ಬ್ಯಾಚ್ B-I	100	110 83
6	2005–06	V ಬ್ಯಾಚ್ B-II	79	91 79
7	2006–07	VI	177	330 72
	ಒಟ್ಟು		**2156**	**1059 80**

ಆ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ 2001–02ನೇ ಹಣಕಾಸು ವರ್ಷದಿಂದ (ಹಂತ–II) 2006–07ನೇ ವರ್ಷದವರೆಗೆ (ಹಂತ–VI) ಮಂಜೂರಾದ ತಾಲ್ಲೂಕುವಾರು ಕಾಮಗಾರಿಗಳ ಹಾಗೂ ಹಣಕಾಸು ವಿವರಗಳನ್ನು ಅನುಬಂದ–1ರಲ್ಲಿ ನೀಡಲಾಗಿದೆ

ಕ್ರ ಸಂ	ಹಣಕಾಸು ವರ್ಷ	ಹಂತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ ಕೋಟಿಗಳಲ್ಲಿ	ಷರಾ
1	2000–01	I	412	103 52	412 ಕಾಮಗಾರಿಗಳಲ್ಲಿ 2 ಕಾಮಗಾರಿಗಳನ್ನು ಎಸ್ ಟಿ ಎ / ಸಿ ಆರ್ ಆರ್ ಐ ನವರು ಪರಿಶೀಲನೆ ಮಾಡುವಾಗ ಕೈಬಿಟ್ಟಿರುತ್ತಾರೆ 4 ಕಾಮಗಾರಿಗಳನ್ನು ಜಮೀನಿನ ತೊಂದರೆ ಹಾಗೂ ಇತರೆ ಯೋಜನೆಯಡಿ ಕೈಗೊಂಡಿರುವುದರಿಂದ ಕೈಬಿಡಲಾಗಿದೆ ಇದಕ್ಕೆ ಕೇಂದ್ರ ಸರ್ಕಾರದ ಮಂಜೂರಾತಿ ಪಡೆಯಲಾಗಿದೆ
2	2001–02 ಮತ್ತು 2002–03	II	938	203 36	938 ಕಾಮಗಾರಿಗಳಲ್ಲಿ 35 ಕಾಮಗಾರಿಗಳನ್ನು CRRI/STA ರವರು ಪರಿಶೀಲನೆ ಮಾಡುವಾಗ PMGSY ಮಾರ್ಗಸೂಚಿ ಅನ್ವಯ ಇಲ್ಲದ ಕಾರಣ ಕೈಬಿಟ್ಟಿರುತ್ತಾರೆ 16 ಕಾಮಗಾರಿಗಳು ಜಮೀನು ತೊಂದರೆ ಹಾಗೂ ಇತರೆ ಯೋಜನೆಯಡಿ ಕೈಗೊಂಡಿರುವುದರಿಂದ ಕೈಬಿಡಲಾಗಿದೆ ಈ ರೀತಿ

ಕ್ರ ಸಂ	ಹಣಕಾಸು ವರ್ಷ	ಹಂತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ ಕೋಟಿಗಳಲ್ಲಿ	ಷರಾ
					ಕೈಬಿಡಲಾದ ಪ್ರಸ್ತಾವನೆಗಳಿಗೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯಲಾಗಿದೆ
3	2003–04	III	360	118 41	ಬೆಳಗಾವಿ ಜಿಲ್ಲೆಯ 1 ಕಾಮಗಾರಿಯನ್ನು ಭೂ ವಿವಾದ ಕಾರಣ ಕೈಬಿಡಲಾಗಿದೆ ಕೇಂದ್ರ ಸರ್ಕಾರದಿಂದ ಮಂಜೂರಾತಿ ಪಡೆಯಲಾಗಿದೆ ಅದೇ ರೀತಿ ಇತರೆ 6 ಕಾಮಗಾರಿಗಳನ್ನು ಭೂ ವಿವಾದದ ಕಾರಣದಿಂದ ಕೈಬಿಡುವ ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ
4	2004–05	IV	90	101 17	ಎಲ್ಲಾ ಕಾಮಗಾರಿಗಳೂ ಕೇಂದ್ರ ಸರ್ಕಾರದಿಂದ ಮಂಜೂರಾಗಿರುತ್ತದೆ ಇದರಲ್ಲಿ ಬಿಜಾಪುರ ಜಿಲ್ಲೆಯ 1 ಕಾಮಗಾರಿಯು, ಇತರೆ ಯೋಜನೆಯಡಿ ಕೈಗೊಂಡಿರುವುದರಿಂದ ಕೈಬಿಡಲಾಗಿದೆ

ಕ್ರ ಸಂ	ಹಣಕಾಸು ವರ್ಷ	ಹಂತ	ಕಾಮಗಾರಿಗಳ ಸಂಖ್ಯೆ	ಅಂದಾಜು ಮೊತ್ತ (ರೂ ಕೋಟಿಗಳಲ್ಲಿ	ಷರಾ
5	2005–06	V ಬ್ಯಾಚ್ –I V ಬ್ಯಾಚ್ -II	100 79	110 83 91 79	ಹಂತ–V ಬ್ಯಾಚ್–II ರಡಿಯಲ್ಲಿ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನ 1 ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯವರು ಕೈಗೊಂಡಿರುವುದರಿಂದ ಕೈಬಿಡಲಾಗಿದೆ
6	2006–07	VI	177	330 72	ಎಲ್ಲಾ ಕಾಮಗಾರಿಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ

ಇ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿಯಲ್ಲಿ ಗದಗ್ ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಕೈಗೊಂಡಿರುವ ಕಾಮಗಾರಿಗಳ ಅನುಷ್ಠಾನದ ವಿವರ ಕೆಳಕಂಡಂತಿದೆ ಕಾಮಗಾರಿಗಳ ಪ್ರಗತಿ ಹಾಗೂ ಹಣಕಾಸು ವೆಚ್ಚದ ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ

i) ಹಂತ–I (2000–01) ಹಂತ–I ರಡಿಯಲ್ಲಿ ಒಟ್ಟು 7 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಗದಗ್ ತಾಲ್ಲೂಕಿನಲ್ಲಿ 1, ರೋಣ ತಾಲ್ಲೂಕಿನಲ್ಲಿ 1, ಶಿರಹಟ್ಟಿ ತಾಲ್ಲೂಕಿನಲ್ಲಿ 2, ಮುಂಡರಗಿ ತಾಲ್ಲೂಕಿನಲ್ಲಿ 1 ಹಾಗೂ ನರಗುಂದ ತಾಲ್ಲೂಕಿನಲ್ಲಿ 3 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ

ii) ಹಂತ–II (2001–02 ಮತ್ತು 2002–03) ಹಂತ–II ರಡಿಯಲ್ಲಿ ಒಟ್ಟು 17 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಗದಗ ತಾಲ್ಲೂಕಿನಲ್ಲಿ 4, ರೋಣ ತಾಲ್ಲೂಕಿನಲ್ಲಿ 4, ಶಿರಹಟ್ಟಿ ತಾಲ್ಲೂಕಿನಲ್ಲಿ 3, ಮುಂಡರಗಿ ತಾಲ್ಲೂಕಿನಲ್ಲಿ 3 ಹಾಗೂ ನರಗುಂದ ತಾಲ್ಲೂಕಿನಲ್ಲಿ 3 ಕಾಮಗಾರಿಗಳು ಸೇರಿವೆ ಈ ಪೈಕಿ 16 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿಕೆ ಶಿರಹಟ್ಟಿ ತಾಲ್ಲೂಕಿನ LH ರಸ್ತೆಯಿಂದ ಬಸಾಪುರ ವರೆಗಿನ ರಸ್ತೆಯನ್ನು ಕರ್ನಾಟಕ ಭೂ ಸೇನಾ ನಿಗಮ ರವರು ನಿರ್ವಹಿಸುತ್ತಿದ್ದು, ಪೂರ್ಣಗೊಳ್ಳುವ ಹಂತದಲ್ಲಿದೆ

iii) ಹಂತ–III (2003–04) ಹಂತ–III ರಡಿಯಲ್ಲಿ ಒಟ್ಟು 6 ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಗದಗ ತಾಲ್ಲೂಕಿನಲ್ಲಿ 1, ರೋಣ ತಾಲ್ಲೂಕಿನಲ್ಲಿ 1, ಶಿರಹಟ್ಟಿ ತಾಲ್ಲೂಕಿನಲ್ಲಿ 2, ಮುಂಡರಗಿ ತಾಲ್ಲೂಕಿನಲ್ಲಿ ಹಾಗೂ ನರಗುಂದ ತಾಲ್ಲೂಕಿನಲ್ಲಿ 1 ಕಾಮಗಾರಿಗಳು ಸೇರಿವೆ ಈ ಪೈಕಿ 3 ಕಾಮಗಾರಿಗಳು ಪೂರ್ಣಗೊಂಡಿರುತ್ತದೆ ಉಳಿಕೆ 3 ಕಾಮಗಾರಿಗಳ ವಿವರ ಕೆಳಕಂಡಂತಿವೆ

(ಅ) ನರಗುಂದ ತಾಲ್ಲೂಕಿನ ಚಿಕ್ಕ ನರಗುಂದದಿಂದ ನರಗುಂದವರೆಗಿನ ರಸ್ತೆ ರಸ್ತೆಯ ಸುಮಾರು 1 ಕಿ.ಮೀ ನಷ್ಟು ಉದ್ದ ಹಳ್ಳದಲ್ಲಿ ಹಾದುಹೋಗುವುದರಿಂದ ಹಾಗೂ ಅಕ್ಕಪಕ್ಕದ ಜಮೀನಿನ

ನೀರಿನಿಂದ ಮುಳುಗಡೆಯಾಗುತ್ತಿದ್ದು, ಈ ಬಗ್ಗೆ ರಾಷ್ಟ್ರಮಟ್ಟದ ಗುಣ ಪರಿವೀಕ್ಷಕರು ಹಾಗೂ ರಾಜ್ಯ ಮಟ್ಟದ ಗುಣ ಪರಿವೀಕ್ಷಕರು ಸದರಿ ರಸ್ತೆಯನ್ನು ಪರಿವೀಕ್ಷಣೆ ಮಾಡಿ ರಸ್ತೆಯ ಈ ಉದ್ದಕ್ಕೆ 2 ಮೀಟರ್‌ನಷ್ಟು ಎತ್ತರ Embankment ಅವಶ್ಯಕತೆ ಇರುತ್ತದೆ ಎಂದು ತಿಳಿಸಿರುತ್ತಾರೆ ಇದು ಆರ್ಥಿಕವಾಗಿ ಸರಿದೂಗದ ಕಾರಣ ಕಾರ್ಯಪಾಲಕ ಇಂಜಿನಿಯರ್‌ರವರು ಈ ಕಾಮಗಾರಿಯನ್ನು ಕೈಬಿಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ ಆದ್ದರಿಂದ ಸದರಿ ಕಾಮಗಾರಿಯನ್ನು ಕೈಬಿಡುವ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ

(ಆ) ರೋಣ ತಾಲ್ಲೂಕಿನ ಅಬ್ಬೇಗೇರಿ – ನಾಗರಾಳ – ನೀರಲಗಿ ರಸ್ತೆ
ಈ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದ್ದು, ರಸ್ತೆಯಲ್ಲಿ 8 ಹೆಚ್ಚುವರಿ ಅಡ್ಡ ಮೋರಿ ನಿರ್ಮಿಸಲು ಅತ್ಯಾವಶ್ಯಕ ಎಂದು ಕಂಡು ಬಂದಿದ್ದರಿಂದ ಕಾರ್ಯಪಾಲಕ ಇಂಜಿನಿಯರ್/ ಅಧೀಕ್ಷಕ ಇಂಜಿನಿಯರ್‌ರವರು ಸೂಕ್ತ ಪ್ರಸ್ತಾವನೆಯನ್ನು ಸಲ್ಲಿಸಿದ್ದು, ಈ ಕಾಮಗಾರಿಗಳನ್ನು ಕೈಗೆತ್ತಿಕೊಂಡು ತ್ವರಿತವಾಗಿ ಪೂರ್ಣಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗಿದೆ

(ಇ) ಮುಂಡರಗಿ ತಾಲ್ಲೂಕಿನ ದೋಣಿ ತಾಂಡದಿಂದ ಚಿಕ್ಕ ವಡ್ಡಟ್ಟಿ ರಸ್ತೆ
ಅರಣ್ಯ ಇಲಾಖೆಯವರು ರಸ್ತೆಯ ಡಾಂಬರೀಕರಣ ಮಾಡಲು ಆಕ್ಷೇಪಣೆ ಮಾಡಿದ್ದರಿಂದ ಉಳಿಕೆ ಎಲ್ಲಾ ಕಾಮಗಾರಿಗಳ ಅಂಶಗಳನ್ನು ಪೂರ್ಣಗೊಳಿಸಲಾಗಿದೆ ಈ ಸಂಬಂಧ ಅರಣ್ಯ ಇಲಾಖೆಯವರ ಜೊತೆ ಪತ್ರ ವ್ಯವಹಾರ ಮಾಡಲಾಗಿದೆ ಈಗ ರಸ್ತೆ ಡಾಂಬರೀಕರಣವನ್ನು ಪೂರ್ಣಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ

iv) ಹಂತ–IV (2004–05) ರೋಣ ತಾಲ್ಲೂಕಿನ ಯಾವಗಲ್ – ನಾಗರಸಿಕೊಪ್ಪ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಜಲ್ಲಿ ಸಂಗ್ರಹ ಮಾಡಲಾಗುತ್ತಿದೆ

v) ಹಂತ–V ಬ್ಯಾಚ್–II (2005–06) ನರಗುಂದ ತಾಲ್ಲೂಕಿನ ಕಲ್ಕೇರಿ ಗುರಲಕಟ್ಟಿ ವಯಾ ಹುಣಸೀಕಟ್ಟಿ – ಸಿದ್ದಾಪುರ ರಸ್ತೆ ಕಾಮಗಾರಿಯು ಪ್ರಗತಿಯಲ್ಲಿದ್ದು, ಜಲ್ಲಿ ಸಂಗ್ರಹ ಮಾಡಲಾಗುತ್ತಿದೆ

vi) ಹಂತ–VI (2006–07) ನರಗುಂದ ತಾಲ್ಲೂಕಿನ ಲಕಮ್‌ಪುರ ಕೊನ್ನೂರು ವಯಾ ವಾಸನ್ ಬೆಳ್ಳೇರಿ ರಸ್ತೆಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ

ಈ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳಲು 3 ಹಂತಗಳಲ್ಲಿ ಗುಣ ನಿಯಂತ್ರಣ ಪರೀಕ್ಷೆ ಮಾಡಲಾಗುತ್ತಿದೆ ಕಾಮಗಾರಿ ಸ್ಥಳದಲ್ಲಿ ಪ್ರಯೋಗಾಲಯವನ್ನು ಅಳವಡಿಸಿ ಎಲ್ಲಾ ಸಾಮಗ್ರಿಗಳ ಗುಣಮಟ್ಟ ಪರೀಕ್ಷಿಸಲಾಗುವುದು 1ನೇ ಹಂತದಲ್ಲಿ ಉಪವಿಭಾಗ ಹಾಗೂ ವಿಭಾಗ ಮಟ್ಟದ ಅಧಿಕಾರಿಗಳು ಸ್ಥಳದಲ್ಲಿಯೇ ಸಾಮಗ್ರಿಗಳ ಪರೀಕ್ಷೆಗಳನ್ನು ಮಾಡಿ NRRDAಯವರು ನಿಗದಿಪಡಿಸಿರುವ ನಮೂನೆಗಳ ರಿಜಿಸ್ಟರ್‌ಗಳಲ್ಲಿ ದಾಖಲಿಸುತ್ತಾರೆ ಫಲಿತಾಂಶವು ತೃಪ್ತಿಕರವಾಗಿದ್ದಲ್ಲಿ ಮಾತ್ರ ಕಾಮಗಾರಿಯನ್ನು ಮುಂದುವರೆಸಲಾಗುತ್ತದೆ ಇಲ್ಲವಾದಲ್ಲಿ ಗುತ್ತಿಗೆದಾರರಿಗೆ ಸರಿಪಡಿಸಲು ಸೂಚಿಸಲಾಗುತ್ತದೆ ಸರಿಪಡಿಸಿದ ನಂತರ ಮರು ಪರೀಕ್ಷೆ ಮಾಡಿ ಗುಣಮಟ್ಟವನ್ನು ದಾಖಲಿಸಲಾಗುತ್ತದೆ 2ನೇ ಹಂತದಲ್ಲಿ ರಾಜ್ಯ ಮಟ್ಟದ ಗುಣಮಟ್ಟ ಪರಿವೀಕ್ಷಣಾಕಾರರು (SQM) ಕಾಮಗಾರಿಗಳನ್ನು ಹಾಗೂ ಕಾಮಗಾರಿಯ ಗುಣಮಟ್ಟವನ್ನು ಪರಿವೀಕ್ಷಣೆ ಮಾಡಿ ವರದಿಯನ್ನು ನಿಗದಿತ ಫಾರಂಗಳಲ್ಲಿ ದಾಖಲಿಸಿ ಸಲ್ಲಿಸುತ್ತಾರೆ ಈ ಕಾರ್ಯಕ್ಕಾಗಿ ನಿವೃತ್ತ ಮುಖ್ಯ ಇಂಜಿನಿಯರ್ ಹಾಗೂ ಅಧೀಕ್ಷಕ ಇಂಜಿನಿಯರ್‌ಗಳನ್ನು ನೇಮಿಸಲಾಗಿದೆ 3ನೇ ಹಂತದಲ್ಲಿ ರಾಷ್ಟ್ರಮಟ್ಟದ ಗುಣ ನಿಯಂತ್ರಣ ಪರಿವೀಕ್ಷಕರು (NQM) ರವರು ಪರಿವೀಕ್ಷಿಸಿ ವರದಿಯನ್ನು ಸಲ್ಲಿಸುತ್ತಾರೆ ಮೇಲಿನ 2 ಮತ್ತು 3ನೇ ಹಂತಗಳಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಅದನ್ನು ಸರಿಪಡಿಸಲಾಗುವುದು ನಂತರ Action Taken Report ಗಳನ್ನು ತಯಾರಿಸಿ ಸಲ್ಲಿಸಲಾಗುವುದು ಅತೃಪ್ತಿಕರ ಕಾಮಗಾರಿಗಳೆಂದು ಕಂಡುಬಂದ ಕಾಮಗಾರಿಗಳನ್ನು ಮತ್ತೊಮ್ಮೆ ಸೂಕ್ತವಾಗಿ ಸರಿಪಡಿಸಿ ಮತ್ತೊಮ್ಮೆ ಗುಣಮಟ್ಟ ಪರಿವೀಕ್ಷಕರಿಂದ ಪರೀಕ್ಷೆಗೆ ಒಳಪಡಿಸಿ ತೃಪ್ತಿಕರವಾಗಿರುವ ಬಗ್ಗೆ ದೃಢೀಕರಿಸಲಾಗುವುದು

ಊ) ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಕಾಮಗಾರಿಗಳ ಗುಣಮಟ್ಟ ಕಾಯ್ದುಕೊಳ್ಳಲು 3 ಹಂತಗಳ ಗುಣ ನಿಯಂತ್ರಣ ವ್ಯವಸ್ಥೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ ಕಾಮಗಾರಿಯು ಅತೃಪ್ತಿಕರವೆಂದು ಪರಿವೀಕ್ಷಣೆ ಸಮಯದಲ್ಲಿ ಕಂಡುಬಂದಲ್ಲಿ ಅದನ್ನು ಆಗಿಂದಾಗಲೇ ಸರಿಪಡಿಸಲು ಸೂಕ್ತ ಕ್ರಮ ಕೈಗೊಂಡು ಗುಣಮಟ್ಟವನ್ನು ಕಾಯ್ದುಕೊಳ್ಳಲಾಗುತ್ತದೆ ಇಲ್ಲವಾದಲ್ಲಿ ಕಾಮಗಾರಿಯನ್ನು ಸರಿಪಡಿಸುವವರೆಗೆ ಸ್ಥಗಿತಗೊಳಿಸಲಾಗುವುದು ಕಾಮಗಾರಿಯನ್ನು ಸರಿಪಡಿಸದಿದ್ದಲ್ಲಿ ಗುತ್ತಿಗೆ ಕರಾರಿನಂತೆ (SBD) ರದ್ದುಗೊಳಿಸಲಾಗುತ್ತಿದೆ ಮೈಸೂರು ಜಿಲ್ಲೆಯಲ್ಲಿ ಹಂತ–3ರಡಿಯಲ್ಲಿ 2 ಪ್ಯಾಕೇಜ್‌ನ 6 ಕಾಮಗಾರಿಗಳನ್ನು ಹಾಗೂ ಹಂತ–3 ರಡಿಯಲ್ಲಿ ಉಡುಪಿ ಜಿಲ್ಲೆಯ 1 ಪ್ಯಾಕೇಜ್‌ನ 5 ಕಾಮಗಾರಿಗಳನ್ನು ರದ್ದುಪಡಿಸಲಾಗಿದೆ





ಕ್ರ. ಸಂ.	ಪಿ.ಎಸ್.	ಅಭ್ಯರ್ಥಿಯ	ಅಭ್ಯರ್ಥಿಯ ಸಂ.	ಸಾಧನೆಯ ವಿವರಗಳು		ಶೇಕಡಾವಾರು (10 ಪೈಕಿ ಗಳಿಸಿದ)	ಸಾಧನೆಯ ಅಭ್ಯರ್ಥಿಯ ಶ್ರೇಣಿಯಲ್ಲಿ	ಶ್ರೇಣಿ (ಗಳಿಸಿದ ಅಭ್ಯರ್ಥಿಯ)	ಷರಾ
				ಸಂಸ್ಥೆ	ವಿಷಯ				
1	2	3	4	5		6	7	8	9
				ಪರೀಕ್ಷೆ-1 (2000-01)					
1	ಗಣಿತ	ಪ್ರಮೋದಿನಿ	ಕೆಇಎ 14-01	ಮಾಧವಕೃಪಾ	ಕಲಾ ವಿಭಾಗ	10.00	00.07	00.07	ಮಾಧವಕೃಪಾದ
2	ಗಣಿತ	ಸುಧೀಂದ್ರ	ಕೆಇಎ 14-01	ಜ್ಞಾನೇಶ್ವರ	ಸಾಮಾನ್ಯ ವಿಜ್ಞಾನ ವಿಭಾಗ	7.00	62.61	62.65	ಜ್ಞಾನೇಶ್ವರದ
3	ಗಣಿತ	ಪ್ರಭಾಕರ	ಕೆಇಎ 14-01	ಜಯಂತಿ	ಮೆಕಾನಿಕ್ ವಿಭಾಗ	3.00	24.17	24.17	ಜಯಂತಿಯವರ
4	ಗಣಿತ	ಮಂಜುಳ	ಕೆಇಎ 14-01	ಅಂಬಿಕಾ	ಸಾಮಾನ್ಯ ವಿಭಾಗ	2.15	23.65	23.73	ಅಂಬಿಕಾದ
5	ಗಣಿತ	ಗಣೇಶ	ಕೆಇಎ 14-02	ಮೋಹನಾಕ್ಷಿ	ಮೋಹನಾಕ್ಷಿ ದಿನ	9.00	98.89	71.51	ಮೋಹನಾಕ್ಷಿಯ
6	ಗಣಿತ	ಮಾಲಾ	ಕೆಇಎ 14-02	ಶಂಕರಾಚಾರ್	ಮೆಕಾನಿಕ್ ಸಿವಿಲ್ ಮೆಕ್ಯಾನಿಕಲ್ ಭಾಗ	5.00	20.67	50.12	ಶಂಕರಾಚಾರ್ಯದ
7	ಗಣಿತ	ಕಿರಣ್	ಕೆಇಎ 14-02	ಕೃಷ್ಣ	ಕೃಷಿಯಲ್ಲಿ	5.00	50.34	29.35	ಮೋಹನಾಕ್ಷಿಯ
				ಪರೀಕ್ಷೆ II [2001-02 ಮತ್ತು 2002-03]					
1	ಗಣಿತ	ಗಣಿತ	ಕೆಇಎ 14-03	ಪೆಟ್ರೋ.	ಶಂಕರಾ	2.30	.584	18.50	ಮಾಧವಕೃಪಾದ
2	ಗಣಿತ	ಗಣಿತ	ಕೆಇಎ 14-03	ಲಕ್ಷ್ಮಿಪ	ಮಾಧವಕೃಪಾದ	4.70	35.96	34.80	ಮಾಧವಕೃಪಾದ
3	ಗಣಿತ	ಸುಧೀಂದ್ರ	ಕೆಇಎ 14-03	ಸಂಜೀವ	ಮೂರನೇ ಭಾಗ	4.00	50.85	70.42	ಮೂರನೇಭಾಗದ
4	ಗಣಿತ	ಪ್ರಭಾಕರ	ಕೆಇಎ 14-03	ಜಯಂತಿ	ಮೆಕಾನಿಕ್ ದಿನ	3.00	22.16	25.00	ಮೆಕಾನಿಕ್ಸ್
5	ಗಣಿತ	ಶಿವಾನಂದ	ಕೆಇಎ 14-03	ಜಯಂತಿ	ಮೆಕಾನಿಕ್	3.00	.949	41.79	ಮೆಕಾನಿಕ್ಸ್
6	ಗಣಿತ	ಮಾಲಾ	ಕೆಇಎ 14-04	ಅಂಬಿಕಾ	ಮೂರನೇ ದಿನ	4.55	36.66	43.00	ಮೂರನೇಭಾಗದ
7	ಗಣಿತ	ಮಂಜುಳ	ಕೆಇಎ 14-04	ಲಕ್ಷ್ಮಣ	ಸಾಮಾನ್ಯ	2.10	.78	20.50	ಸಾಮಾನ್ಯವಿಭಾಗ
8	ಗಣಿತ	ಪ್ರಮೋದಿನಿ	ಕೆಇಎ 14-04	ಲಕ್ಷ್ಮಿ	ಸಾಮಾನ್ಯ ವಿಭಾಗ	4.00	32.46	37.10	ಮೆಕಾನಿಕ್ಸ್
9	ಗಣಿತ	ಪ್ರಭಾಕರ	ಕೆಇಎ 14-04	ಜಯಂತಿ	ಮೆಕಾನಿಕ್ ದಿನ	2.00	30.04	3.11	ಮೆಕಾನಿಕ್ಸ್
10	ಗಣಿತ	ಗಣಿತ	ಕೆಇಎ 14-05	ಲಕ್ಷ್ಮಿಕಾಂತ	ಮೆಕ್ ಅಂಡ್ ಮೆಕಾನಿಕ್ಸ್	1.75	1.00	1.40	ಮೆಕಾನಿಕ್ಸ್
11	ಗಣಿತ	ಗಣಿತ	ಕೆಇಎ 14-05	ಸಂಜೀವ ಆಚಾರ್	ಸಾಮಾನ್ಯ	4.00	48.97	18.50	ಮೂರನೇಭಾಗದ
12	ಗಣಿತ	ಮಂಜುಳ	ಕೆಇಎ 14-05	ಮೋಹನ	ಸಾಮಾನ್ಯ	5.00	40.31	46.31	ಮೆಕಾನಿಕ್ಸ್
13	ಗಣಿತ	ಪ್ರಮೋದಿನಿ	ಕೆಇಎ 14-05	ಗಣೇಶ	ಸಿ ಸಿವಿ	7.00	44.26	44.20	ಮೋಹನ ಸಿವಿ ಭಾಗ
14	ಗಣಿತ	ಶಿವಾನಂದ	ಕೆಇಎ 14-05	ಜಯಂತಿ	ಮೆಕ್ಯಾನಿಕ್ಸ್	4.00	32.10	32.10	ಮೆಕಾನಿಕ್ಸ್
15	ಗಣಿತ	ಮಾಲಾ	ಕೆಇಎ 14-05	ಅಂಬಿಕಾ	ಭಾಗ	5.00	58.64	58.64	ಮೂರನೇ ಭಾಗದ
16	ಗಣಿತ	ಮಾಲಾ	ಕೆಇಎ 14-05	ಶಂಕರ್ ರಾವ್	ಮೂರನೇಭಾಗದ	2.00	6.8.	16.61	ಮೂರನೇ ಭಾಗದ
17	ಗಣಿತ	ಪ್ರಮೋದಿನಿ	ಕೆಇಎ 14-05	ಲಕ್ಷ್ಮಿ ದೇವಿ ಬಿ.	ಸಾಮಾನ್ಯ	5.00	48.97	58.00	ಮೂರನೇಭಾಗದ ಮೆಕಾನಿಕ್ಸ್

ಕ್ರ ಸಂ	ಜಿಲ್ಲೆ	ತಾಲ್ಲೂಕು	ಜಾಕ್‌ವೆಲ್ ಸಂ.	ಕಾಮಗಾರಿ ಹೆಸರು		ಕಾಲ್ವೆ (ಕಿ.ಮೀ ಗಳಲ್ಲಿ)	ಆಯಾಜು ಮೊತ್ತ (ರೂ. ಲಕ್ಷಗಳಲ್ಲಿ)	ಕೆಲ್ಸ (ಮಿ. ಲಕ್ಷಗಳಲ್ಲಿ)	ಷರಾ
				ಮೊದಲ	ಕಡೆಗೆ				
1	2	3	4	5		6	7	8	9
ಹಂತ III (2003-04)									
1	ಗದಗ	ಗದಗ	ಕೆಎಸ್-14 06	ಹಿರೇಹಂದಿಗೋಳ	ಗದಗ	10.00	127 57	116.62	ಪೂರ್ಣಗೊಂಡಿದೆ
2	ಗದಗ	ರೋಣ	ಕೆಎಸ್-14 07	ಅಡ್ಡಿಗೇರಿ	ಹಾಗರಬಾಳ ಕೆರೆಯ	9 00	107.02	102 46	ಗೇಟ್-II ಪೂರ್ಣಗೊಂಡಿದೆ
3	ಗದಗ	ಗಜೇಂದ್ರಗಡ	ಕೆಎಸ್ 14 07	ಹಿಲ್ಲೂರಹುಲಿಕಟ್ಟಿ	ಹರಿಗೋಡ	4.00	56 66	0.25	ಕೃಷಿಯಿಂದ ಪೃಷ್ಠಿಪಡೆಗೆ ಸಂಪೂರ್ಣಗೊಂಡಿದೆ
4	ಗದಗ	ಶಿರಹಟ್ಟಿ	ಕೆಎಸ್ 14 08	ರಾಜೂರ	ಬೆಳ್ಳಟ್ಟಿ	2 50	30.58	26 54	ಪೂರ್ಣಗೊಂಡಿದೆ
5	ಗದಗ	ಶಿರಹಟ್ಟಿ	ಕೆಎಸ್-14 08	ಮುಚಿಗೆರಿ	ಶಿರಹಟ್ಟಿ	3 00	31 20	26 13	ಪೂರ್ಣಗೊಂಡಿದೆ
6	ಗದಗ	ಮುಂಡರಗಿ	ಕೆಎಸ್-14-08	ದೇವಿಕೊಪ್ಪ	ಚಿಕ್ಕಮಣ್ಣೂರ	15 50	87.13	42 48	ಗೇಟ್-II ಪೂರ್ಣಗೊಂಡಿದೆ
ಹಂತ- V (2004-05)									
1	ಗದಗ	ರೋಣ	ಕೆಎಸ್-14 09	ಯಾವಗಲ್ ನಾಗೇಂದ್ರಗೌಡ್ರ	ಹಿರೆ ಕೊಪ್ಪ ಮೂಲ ಪೈಪಾಂಬುಧರ	2 70	54 16	31 38	ಗೇಟ್-II ಪೂರ್ಣಗೊಂಡಿದೆ
ಹಂತ V ಮ್ಯಾಪ್-II (2005-06)									
1	ಗದಗ	ಗಜೇಂದ್ರಗಡ	ಕೆಎಸ್-14 10	ಕಲ್ಕೇರಿ	ಗೊಣಿಸಕೊಪ್ಪ ಮಾರ್ಗ ಮಾಜಿ ಸಂಸದರ ಲಿಫ್ಟ್‌ವರೆಗೆ	13.30	238 .2	39.47	ಗೇಟ್-II ಪೂರ್ಣಗೊಂಡಿದೆ
Phase-V - (2006-07									
1	ಗದಗ	ನರಗುಂದ	ಕೆಎಸ್-14 11	ಕೊಣ್ಣೂರು	ಅಕ್ಕಿಹುಲಿಕಟ್ಟಿ ಮಾರ್ಗ ಪೈಪ್‌ಲೈನ್	4 05	93 57	0	ಹೊಸದಾಗಿ ಪ್ರಾರಂಭವಾಗಿದೆ